**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಸವಣೂರ**

**ಸಿ.ಸಿ. ಸಂಖ್ಯೆ : 559/2025**

ಫಿರ್ಯಾದಿ : ರವಿ ತಾಯಿ ಬೀಮವ್ವ ಮೈಲಮ್ಮನವರ

**ವಿರುದ್ಧ**

ಆರೋಪಿ : ಜಾಪ್ರೂಲ್ಲಾ ತಂದೆ ಗನಿ ಹಾಜಿ

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ಅಡಿ ಆರೋಪಿತನ ಹೇಳಿಕೆ**

**ಪ್ರಶ್ನೆ- 1 :** ನೀವು ಈ ಪ್ರಕರಣದ ಫಿರ್ಯಾದಿ ನುಡಿದ ಸಾಕ್ಷ್ಯವನ್ನು ಕೇಳಿದ್ದೀರಾ?

**ಉತ್ತರ :**

**ಪ್ರಶ್ನೆ-2 :** ಫಿರ್ಯಾದಿರವರು ತಮ್ಮ ಸಾಕ್ಷ್ಯದಲ್ಲಿ ನೀವು ದಿ : 01-12-2024 ರಂದು ನಿಮ್ಮ ಮಗಳ ಆಸ್ಪತ್ರೆಯ ಖರ್ಚಿಗಾಗಿ ಮತ್ತು ಮನೆತನದ ಅಡಚಣೆಯ ಸಲುವಾಗಿ ಫಿರ್ಯಾದುದಾರರಿಂದ ರೂ.1,25,000/- ಗಳ ಕೈಗಡ ಸಾಲವನ್ನು ಪಡೆದುಕೊಂಡಿರುತ್ತೀರಿ ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುವಿರಿ?

**ಉತ್ತರ :**

**ಪ್ರಶ್ನೆ-3 :** ಮುಂದುವರೆದು, ಸದರಿ ಹಣವನ್ನು ಮರಳಿಸುವ ಕುರಿತು, ನೀವು ನಿಮ್ಮ ಖಾತೆ ಹೊಂದಿರುವ IDFC ಬ್ಯಾಂಕ್, ಶಿಗ್ಗಾಂವ ಶಾಖೆಯ ಚೆಕ್ ನಂ 000010 ರಲ್ಲಿ ರೂ.1,25,000/- ದಿ : 14-03-2025 ಅಂತಾ ನಮೂದಿಸಿ ಚೆಕ್ಕನ್ನು ಕೊಟ್ಟಿದ್ದು ಇರುತ್ತದೆ ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುವಿರಿ?

**ಉತ್ತರಃ**

**ಪ್ರಶ್ನೆ-4 :** ಮುಂದುವರೆದು, ಫಿರ್ಯಾದುದಾರರು ತಾವು ಖಾತೆ ಹೊಂದಿರುವ ದಿ ಸವಣೂರ ಅರ್ಬನ್ ಕೋ ಆಪ ಬ್ಯಾಂಕ್ ಲಿ, ಸವಣೂರ ಶಾಖೆ, ಇವರಲ್ಲಿ ಸದರಿ ಚೆಕ್‌ನ್ನು ನಗಧಿಕರಿಸಲು ಹಾಕಿದ್ದು, ಸದರಿ ಬ್ಯಾಂಕಿನವರು "Payment stopped by drawer " ಅಂತ ಸದರಿ ಚೆಕ್ಕನ್ನು ದಿನಾಂಕ 15-03-2025 ರಂದು ಬ್ಯಾಂಕಿನ ಮೆಮೊ ಲಗತ್ತಿಸಿ ಹಿಂದಿರುಗಿಸಿರುತ್ತಾರೆ ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುವಿರಿ?

**ಉತ್ತರಃ**

**ಪ್ರಶ್ನೆ-5 :** ಮುಂದುವರೆದು ಫಿರ್ಯಾದುದಾರರು ದಿನಾಂಕ : 25-03-2025 ರಂದು ತಮ್ಮ ವಕೀಲರ ಮುಖಾಂತರ ಸದರಿ ಚೆಕ್‌ನಲ್ಲಿ ನಮೂದಿಸಿದ ರೂ.1,25,000/- ಗಳನ್ನು ನೋಟಿಸ್ ಮುಟ್ಟಿದ 15 ದಿನಗಳ ಒಳಗಾಗಿ ಕೊಡಲು ಕಾನೂನು ರೀತ್ಯಾ ನೋಟಿಸನ್ನು ನಿಮ್ಮ ವಿಳಾಸಕ್ಕೆ ಸ್ವೀಕೃತ ಅಂಚೆ ಮುಖಾಂತರ ನೀಡಿದ್ದು ಇರುತ್ತದೆ ಎಂದು ಮತ್ತು ಸದರಿ ನೋಟಿಸು ನೀವು ತೆಗೆದುಕೊಳ್ಳದ್ದರಿಂದ ದಿನಾಂಕ 05-04-2025 ರಂದು ಮರಳಿ ಬಂದಿದ್ದು ಇರುತ್ತದೆ. ಆದರೆ ನೀವು ನೋಟಿಸ್ ಗೆ ಯಾವುದೇ ಉತ್ತರವನ್ನು ಕೊಟ್ಟಿರುವುದಿಲ್ಲ ಮತ್ತು ಚೆಕ್ ಹಣವನ್ನು ಈವರೆಗೂ ಫಿರ್ಯಾದಿದಾರರಿಗೆ ಕೊಟ್ಟಿರುವುದಿಲ್ಲ. ನೀವು ಫಿರ್ಯಾದುದಾರರಿಗೆ ಕೊಡಬೇಕಾದ ಸದರಿ ಹಣವನ್ನು ಕೊಡದೇ ಮೋಸ ಹಾಗೂ ವಂಚನೆ ಮಾಡುವ ದುರುದ್ದೇಶದಿಂದ ಖೊಟ್ಟಿ ಚೆಕ್ಕನ್ನು ನೀಡಿ ಆ ಮೂಲಕ ನೀವು ವರ್ಗಾವಣೆಯ ಲಿಖಿತಗಳ ಅಧಿನಿಯಮ ಕಲಂ-138 ಅಡಿಯಲ್ಲಿ ಅಪರಾಧ ಮಾಡಿರುತ್ತೀರಿ ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುವಿರಿ ?

**ಉತ್ತರಃ**

**ಪ್ರಶ್ನೆಃ 6** ನೀವು ಮತ್ತೇನಾದರೂ ಹೇಳುವುದು ಅಥವಾ ದಾಖಲೆ ಸಲ್ಲಿಸುವುದು ಇದೆಯಾ ?

**ಉತ್ತರಃ**

**ಪ್ರಶ್ನೆ-7 :** ನಿಮ್ಮ ಪರ ಸಾಕ್ಷಿ ವಿಚಾರಣೆ ಮಾಡಿಸುವಿರಾ ?

**ಉತ್ತರಃ**

(ಈ ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ, ಹೇಳಿ ಆರೋಪಿ ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಂಡಿದೆ ಎಂದು ಪ್ರಮಾಣಿಕರಿಸುತ್ತೇನೆ)

**(ಶ್ರೀನಿವಾಸ. ಎಸ್.ಎನ್)**
**ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ.ಗಳು ಸವಣೂರ.**

ದಿನಾಂಕ : 22-04-2026

ಆರೋಪಿ ಸಹಿ: